3.	ವ್ಯ.ಸೇ.ಸ.ಸಂ.ನಿ., ಕೋಳಾಲ	-"-	1999-2000	1.52	16-02-2002

ಕೊರಟಗೆರೆ ತಾಲ್ಲೂಕಿನ ಕೆರೆಗಳ ಹೂಳೆತ್ತುವುದು

1392 (1669) - ಶ್ರೀ ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಾದ್ಯಾಂತ ಕೆರೆಗಳಲ್ಲಿ ಹೂಳು ತುಂಬಿದ್ದು ಇವುಗಳನ್ನು ತೆಗೆಯಲು ಸರ್ಕಾರವು ಯಾವುದೇ ಕ್ರಮ ಕೈಗೊಳ್ಳದಿರುವುದು ನಿಜವೇ;

ಆ) ಈ ಕೆರೆಗಳಲ್ಲಿ ಹೂಳು ಅಧಿಕವಾಗಿದ್ದು; ಇದರಿಂದ ಜಲ ಮಟ್ಟವು ಕುಸಿದು ಹೋಗಿದ್ದು ಹೂಳು ತೆಗೆಯಲು ಅನುದಾನ ಬಿಡುಗಡೆ ಮಾಡಿ ಜಲಮಟ್ಟವನ್ನು ಕಾಪಾಡಿ ರೈತಾಪಿ ವರ್ಗದವರಿಗೆ ಅನುಕೂಲ ಮಾಡಿಕೊಡಲು ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಜಲ ಸಂಪನ್ಮೂಲ ರಾಜ್ಯ ಸಚಿವರು)

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ 40 ಹೆಕ್ಟೇರ್‌ಗಿಂತ ಹೆಚ್ಚಿನ ಅಚುಕಟ್ಟು ಇರುವ 45 ಕೆರೆಗಳಿವೆ. ಈ ಕೆರೆಗಳು ರಾಜ್ಯದಲ್ಲಿರುವ ಬಹುತೇಕ ಕೆರೆಗಳಂತೆ ಹೂಳಿನಿಂದ ತುಂಬಿರುತ್ತದೆ. ಕೊರಟಗೆರೆ ತಾಲ್ಲೂಕಿನಲ್ಲಿ 1999-2000ನೇ ಸಾಲಿನಲ್ಲಿ ಅಕ್ಕಿರಾಂಪುರ ಕೆರೆ ಹಾಗೂ ಬುಕ್ಕಾಪಟ್ಟಣ ನಾಗೇನಹಳ್ಳಿ ಕೆರೆ ಈ ಎರಡು ಕೆರೆಗಳ ಕಾಮಗಾರಿಗೆ ಪ್ರತ್ಯೇಕವಾಗಿ ರೂ: 4.00 ಲಕ್ಷಗಳ ಅಂದಾಜುಗಳನ್ನು ಮಂಜೂರು ಮಾಡಿತ್ತಾದರೂ, ಇಂತಹ ಕಾಮಗಾರಿಗಳನ್ನು ಜಲ ಸಂವರ್ಧನೆ ಕಾರ್ಯಕ್ರಮದೊಡನೆ ಸಮನ್ವಯಗೊಳಿಸುವ ಉದ್ದೇಶದಿಂದ ಈ ಕಾಮಗಾರಿಯನ್ನು ಮಾಡಿರುವುದಿಲ್ಲ. ಈಗ ಹೂಳೆತ್ತುವ ಕಾಮಗಾರಿಯನ್ನು ಕೆರೆಗಳ ಸಮಗ್ರ ಅಭಿವೃದ್ಧಿ ಕಾರ್ಯಗಳೊಂದಿಗೆ ಕೈಗೊಳ್ಳಲು "ರೈತ ಕಾಯಕ ಕೆರೆ" ಕಾರ್ಯಕ್ರಮವನ್ನು ರೂಪಿಸಿ, ಅಚ್ಚುಕಟ್ಟುದಾರರ ಸಹಭಾಗಿತ್ವದೊಂದಿಗೆ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಕೆರೆಗಳಲ್ಲಿ ಹೂಳು ತುಂಬಿ ಜಲ ಸಂಗ್ರಹಣ ಸಾಮರ್ಥ್ಯವು ಕಡಿಮೆ ಆಗಿರುತ್ತದೆ. ಇಂತಹ ಕೆರೆಗಳ ಹೂಳು ತೆಗೆಯುವ ಕಾರ್ಯವನ್ನು ಕೆರೆಗಳ ಸಮಗ್ರ ಅಭಿವೃದ್ಧಿದೊಂದಿಗೆ ಹಂತ ಹಂತವಾಗಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ರಾಜ್ಯದಲ್ಲಿ ಪ್ರತಿ ಹೋಬಳಿಗೆ ಒಂದು ಕೆರೆಯಂತೆ 745 ಕೆರೆಗಳನ್ನು ಗುರುತಿಸಿ "ರೈತ ಕಾಯಕ ಕೆರೆ" ಕಾರ್ಯಕ್ರಮದಡಿಯಲ್ಲಿ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಸನೀಇ: 241: ಕೆಜದು: 2000 ದಿನಾಂಕ:28-11-2001 ರಲ್ಲಿ ಅನುಮೋದನೆ ನೀಡಲಾಗಿದೆ. ಇದರಲ್ಲಿ ಕೊರಟಗೆರೆ ತಾಲ್ಲೂಕಿಗೆ ಸೇರಿದ 4 ಕೆರೆಗಳು ಇರುತ್ತವೆ. ಈ ಆದೇಶದಲ್ಲಿ ವಿಧಿಸಿರುವ ಪೂರ್ವ ನಿಬಂಧನೆ ಹಾಗೂ ಕಾಲಮಿತಿಯಂತೆ ರೈತರಲ್ಲಿ ಅರಿವನ್ನು ಸೃಷ್ಟಿಸಿ ಬಳಕೆದಾರರ ಸಂಘವನ್ನು ರಚಿಸುವುದಕ್ಕೆ 6 ರಿಂದ 9 ತಿಂಗಳು ಹಾಗೂ ನಂತರ ಅಂದಾಜು ಪಟ್ಟಿಯನ್ನು ತಯಾರಿಸಲು 3 ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಇಂತಹ ಪೂರ್ವ ನಿಬಂಧನೆಗಳಂತೆ ಪೂರ್ವಭಾವಿ ಕ್ರಮಗಳನ್ನು ಕೈಗೊಂಡು ಪೂರ್ಣಗೊಳಿಸಿದ ನಂತರ ಅಂದಾಜುಗಳನ್ನು ಮಂಜೂರು ಮಾಡಿಕೊಂಡು ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.